


# ಸಿದ್ಧರು

* ಜೀವರಲ್ಲಿ ನಾಲ್ಕು ವಿಧ – ಬದ್ಧಜೀವ, ಮುಮುಕ್ಷುಜೀವ, ಮುಕ್ತಜೀವ, ನಿತ್ಯಜೀವ. ಎಲ್ಲರೂ ಸಾಧನೆ ಮಾಡಲೇಬೇಕು ಎಂಬುದೇನಿಲ್ಲ. ನಿತ್ಯಸಿದ್ಧರೂ ಇದ್ದಾರೆ, ಸಾಧನಸಿದ್ಧರೂ ಇದ್ದಾರೆ. ಕೆಲವರು ಬಹಳವಾಗಿ ಸಾಧನೆ ಮಾಡಿದ ಬಳಿಕ ಭಗವಂತನನ್ನು ಪಡೆದುಕೊಳ್ಳುತ್ತಾರೆ. ಇನ್ನು ಕೆಲವರು ಆಜನ್ಮದಿಂದಲೇ ಸಿದ್ಧರು.

* ಯಾರು ಕಾಮಕಾಂಚನಗಳಲ್ಲೇ ನಿರತರಾಗಿದ್ದಾರೋ, ಭಗವಂತನ ಕಡೆಗೆ ಒಂದಿನಿತೂ ಮನಸ್ಸು ಕೊಡುವುದಿಲ್ಲವೋ ಅವರೇ ಬದ್ಧಜೀವರು. ಅವರಿಂದ ಮಹತ್ಕಾರ್ಯವೇನಾದರೂ ಸಾಧ್ಯವಾಗಬಲ್ಲುದೇ? ಅವರು ಕಾಗೆ ಕುಟುಕಿದ ಮಾವಿನ ಹಣ್ಣಿನ ಹಾಗೆ, ದೇವರಿಗಂತೂ ಅರ್ಪಿಸಲಾಗುವುದಿಲ್ಲ; ಮನುಷ್ಯರೂ ತಿನ್ನಲು ಹಿಂಜರಿಯುತ್ತಾರೆ.

ಬದ್ಧಜೀವ, ಅಂದರೆ ಸಂಸಾರಜೀವ ರೇಷ್ಮೆಹುಳುವಿನ ಹಾಗೆ. ಇಚ್ಛೆಪಟ್ಟರೆ ಅದು ತನ್ನ ಗೂಡನ್ನು ಕತ್ತರಿಸಿ ಹೊರಕ್ಕೆ ಬರಬಲ್ಲುದು. ಆದರೆ ಅದು ತಾನೆ ಅದನ್ನು ನಿರ್ಮಿಸಿರುವುದರಿಂದ ಮೋಹ ಅಡ್ಡಲಾಗಿ ಬಂದು ನಿಂತುಕೊಳ್ಳುತ್ತದೆ. ಕೊನೆಗೆ ಅಲ್ಲೇ ಅದಕ್ಕೆ ಮೃತ್ಯು.

ಮುಕ್ತಜೀವ, ಕಾಮಕಾಂಚನಗಳ ವಶ ಅಲ್ಲ. ಕೆಲಕೆಲವು ರೇಷ್ಮೆಹುಳುಗಳು ತಾವು ಅಷ್ಟೊಂದು ಶ್ರಮವಹಿಸಿ ಕಟ್ಟಿದ್ದ ಗೂಡುಗಳನ್ನು ಕತ್ತರಿಸಿ ಹೊರಕ್ಕೆ ಬಂದುಬಿಡುತ್ತವೆ. ಆದರೆ ಅಂಥವೆಲ್ಲೋ ಒಂದೆರಡು.

* ಮಾಯೆ ಜೀವರನ್ನು ಮುಗ್ಧಗೊಳಿಸಿ ತನ್ನ ಬಂಧನದಲ್ಲಿ ಇಟ್ಟುಕೊಳ್ಳುತ್ತದೆ. ಎಲ್ಲೋ ಕೆಲವರಿಗೆ ಮಾತ್ರ ಬ್ರಹ್ಮಜ್ಞಾನ ದೊರೆಯುತ್ತದೆ. ಅವರು ಮಾಯೆಯ ಇಂದ್ರಜಾಲದಿಂದ ಮೋಹಿತರಾಗುವುದಿಲ್ಲ; ಕಾಮಕಾಂಚನಗಳಿಗೆ ವಶರಾಗುವುದಿಲ್ಲ.

* ಯಾರು ನಿತ್ಯಸಿದ್ಧರೋ ಅವರು ಸಂಸಾರಕ್ಕೆ ಕಾಲಿಡಬೇಕಾಗಿರುವುದಿಲ್ಲ. ಅವರ ಭೋಗವಾಸನೆ, ಹುಟ್ಟುವುದಕ್ಕೆ ಮುನ್ನವೇ ಪೂರ್ಣಗೊಂಡುಬಿಟ್ಟಿರುತ್ತದೆ. ಅವರು ಆತ್ಮಜಾಗೃತಿ ಹೊಂದಿಯೇ ಪ್ರತಿಯೊಂದು ಸಲ ಜನ್ಮವೆತ್ತುತ್ತಾರೆ. ಇವರನ್ನು ಮುಚ್ಚಿಹೋಗಿರುವ ಬುಗ್ಗೆಗಳಿಗೆ ಹೋಲಿಸಬಹುದು. ಕೊಳಾಯಿಗಾರ ತೋಟದಲ್ಲಿ ಅಲ್ಲಿ ಇಲ್ಲಿ ಅಗೆಯುತ್ತಿರುವಾಗ ಅಕಸ್ಮಾತ್ತಾಗಿ ಆತ ಬುಗ್ಗೆಯ ತಡೆಯನ್ನು ತೆಗೆದು ಹಾಕಿಬಿಡಬಹುದು. ಆಗ ನೀರು 'ಭರ್, ಭರ್' ಅಂತ ಹೊರಕ್ಕೆ ನುಗ್ಗಿ ಬರುತ್ತದೆ. ಹಾಗೆ ನಿತ್ಯಸಿದ್ಧರ ಪ್ರಥಮಾನುರಾಗ ವ್ಯಕ್ತವಾದಾಗ ಜನ ಆಶ್ಚರ್ಯಚಕಿತರಾಗಿ ಹೇಳುತ್ತಾರೆ: ''ಇಷ್ಟೊಂದು ಭಕ್ತಿ, ವೈರಾಗ್ಯ, ಪ್ರೇಮ ಎಲ್ಲಿ ಇತ್ತು?''

ನರೇಂದ್ರ, ಭವನಾಥ, ರಾಖಾಲ ಇವರು ನಿತ್ಯಸಿದ್ಧರ ಗುಂಪಿಗೆ ಸೇರಿದವರು; ಈಶ್ವರಕೋಟಿಗಳು, ಇವರಿಗೆ ಸಾಧನೆ ಅನಾವಶ್ಯಕ.

* ನಿತ್ಯಸಿದ್ಧರು ಒಂದು ಪ್ರತ್ಯೇಕ ಶ್ರೇಣಿಗೆ ಸೇರಿದವರು. ಅವರು ಅರಣಿಕಡ್ಡಿಯ ಹಾಗೆ. ಸ್ವಲ್ಪ ಉಜ್ಜಿದರೇ ಹೊತ್ತಿಕೊಂಡುಬಿಡುತ್ತದೆ. ಉಜ್ಜದೆಯೂ ಅದರಿಂದ ಬೆಂಕಿ ಉತ್ಪನ್ನ ಮಾಡಬಹುದು. ಸ್ವಲ್ಪ ಸಾಧನೆ ಮಾಡಿದರೆ, ಇನ್ನು ಕೆಲವು ವೇಳೆ ಯಾವ ಸಾಧನೆಯನ್ನೂ ಮಾಡದೆಯೆ ನಿತ್ಯಸಿದ್ಧರು ಭಗವಂತನ ಸಾಕ್ಷಾತ್ಕಾರ ಪಡೆದುಕೊಂಡು ಬಿಡುತ್ತಾರೆ. ಕುಂಬಳಕಾಯಿ ಅಥವಾ ಸೋರೆಗಿಡದ ಹಾಗೆ, ಮೊದಲು ಕಾಯಿ – ಅನಂತರ ಹೂವು.

* ಸಿದ್ಧರಲ್ಲಿ ಎರಡು ವಿಧ; ಸಾಧನ–ಸಿದ್ಧರು, ಕೃಪಾಸಿದ್ಧರು. ಕೆಲಕೆಲವು ಮಂದಿ ರೈತರು ಬಹಳವಾಗಿ ದುಡಿದು ತಮ್ಮ ತಮ್ಮ ಗದ್ದೆಗಳಿಗೆ ನೀರು ಹಾಯಿಸುತ್ತಾರೆ. ಹಾಗೆ ಮಾಡಿದರೇನೇ ಬೆಳೆ ಸಾಧ್ಯ. ಕೆಲಕೆಲವರಿಗೆ ಯಾವ ಸಾಧನೆಯನ್ನೂ ಮಾಡದೆ ಭಗವಂತನ ಸಾಕ್ಷಾತ್ಕಾರ ದೊರೆತುಬಿಡುತ್ತದೆ. ಅವರಿಗೆ ನಿತ್ಯಸಿದ್ಧರು ಎಂದು ಹೆಸರು. ಜಪತಪಾದಿ ಸಾಧನೆ ಮಾಡಿ ಭಗವಂತನ ಸಾಕ್ಷಾತ್ಕಾರ ಪಡೆದುಕೊಂಡಿರತಕ್ಕವರಿಗೆ ಸಾಧನಸಿದ್ಧರೆಂದು ಹೆಸರು. ಮತ್ತೆ ಕೃಪಾಸಿದ್ಧರೆಂಬವರು ಇದ್ದಾರೆ. ಉದಾಹರಣೆಗೆ ಸಹಸ್ರಾರು ವರ್ಷಗಳಿಂದ ಅಂಧಕಾರದಲ್ಲಿ ಮುಳುಗಿದ್ದ ಕೊಠಡಿಗೆ ಬೆಳಕು ತಂದರೆ ಅದು ಒಡನೆಯೇ ಬೆಳಗುವುದಿಲ್ಲವೇ? ಹಾಗೇ ಇವರೂ ಕೂಡ.


ಮತ್ತೂ ಕೆಲವರು ಇದ್ದಾರೆ, ಹಠಾತ್ ಸಿದ್ಧರೆಂಬುವರು. ಇವರ ವಿಷಯ ಹೇಗೆಂದರೆ ಒಬ್ಬ ಬಡ ಹುಡುಗನ ಮೇಲೆ ಧನಿಕನ ಕಣ್ಣು ಬಿದ್ದಂತೆ. ಹುಡುಗನಿಗೆ ಮಗಳನ್ನು ಕೊಟ್ಟು ವಿವಾಹ ಮಾಡಿ, ಮನೆ–ಮಠ, ಆಸ್ತಿ–ಪಾಸ್ತಿ, ಕುದುರೆಗಾಡಿ, ಸೇವಕ–ಸೇವಕಿಯರು ಇತ್ಯಾದಿಗಳನ್ನು ವರದಕ್ಷಿಣೆಯಾಗಿ ಕೊಟ್ಟುಬಿಡುತ್ತಾನೆ.

ಇನ್ನು ಕೆಲವರು ಇದ್ದಾರೆ, ಸ್ವಪ್ನಸಿದ್ಧರೆಂಬರು. ಇವರಿಗೆ ಸ್ವಪ್ನದಲ್ಲಿ ಭಗವಂತನ ದರ್ಶನ ದೊರೆತುಬಿಟ್ಟಿರುತ್ತದೆ.

* ಕರ್ತಾಭಜಾ ಸಂಪ್ರದಾಯದವರು ಭಕ್ತರನ್ನು ಪ್ರವರ್ತಕ, ಸಾಧಕ, ಸಿದ್ಧ, ಸಿದ್ಧರ ಸಿದ್ಧ ಎಂಬುದಾಗಿ ನಾಲ್ಕು ಪಂಗಡಗಳಾಗಿ ವಿಂಗಡಿಸುತ್ತಾರೆ. **ಪ್ರವರ್ತಕ** ಓದುತ್ತಾನೆ, ಕೇಳುತ್ತಾನೆ. ಎರಡನೆಯದು **ಸಾಧಕ**ನ ಹಂತ. ಆತ ಭಗವಂತನಿಗೆ ಪ್ರಾರ್ಥನೆ ಸಲ್ಲಿಸುತ್ತಾನೆ, ಧ್ಯಾನ–ಚಿಂತನೆ ಮಾಡುತ್ತಾನೆ, ನಾಮಗುಣಕೀರ್ತನೆ ಮಾಡುತ್ತಾನೆ. ಮೂರನೆಯ ಹಂತ **ಸಿದ್ಧ**ನದು, ಭಗವಂತನನ್ನು ತನ್ನ ಅಂತರ್ಯದಲ್ಲಿ ಅರಿತುಕೊಂಡಿರುತ್ತಾನೆ, ದರ್ಶನಮಾಡಿಕೊಂಡಿರುತ್ತಾನೆ. ಕೊನೆಯ ಹಂತ **ಸಿದ್ಧರ ಸಿದ್ಧ**ನದು. ಉದಾಹರಣೆಗೆ ಚೈತನ್ಯನದು. ಕೆಲವು ವೇಳೆ ವಾತ್ಸಲ್ಯಭಾವದಿಂದ ಇರುತ್ತಾನೆ, ಇನ್ನು ಕೆಲವು ವೇಳೆ ಮಧುರಭಾವದಿಂದ ಇರುತ್ತಾನೆ. ✷

**ಶ್ರೀರಾಮಕೃಷ್ಣ ವಚನವೇದ** ದಿಂದ





# ಸ್ವಾಮಿ ವಿವೇಕಾನಂದರ ಚಾಮುಂಡೇಶ್ವರಿ ದೇಗುಲ ದರ್ಶನ

## -ಒಂದು ಅಧಿಕೃತ ಮಾಹಿತಿ-

ಸಿ.ಎಸ್.ಮಂಗಳಮ್ಮ

**ಸ್ವಾಮಿ ವಿವೇಕಾನಂದರು ಮೈಸೂರಿಗೆ ಭೇಟಿ ನೀಡಿರುವುದು ಚಾರಿತ್ರಿಕ ಘಟನೆ. ಆದರೆ ಅವರು ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿದ ವಿಚಾರ ಇಲ್ಲಿಯವರೆಗೆ ಕೇವಲ ಊಹೆಯಷ್ಟೇ ಆಗಿತ್ತು; ಅದಕ್ಕೆ ಯಾವುದೇ ದಾಖಲೆ ಲಭ್ಯವಿರಲಿಲ್ಲ. ಅಧಿಕೃತ ಮಾಹಿತಿಯೊಂದಿಗೆ ಈ ಐತಿಹಾಸಿಕ ಸತ್ಯವನ್ನು ದಾಖಲಿಸಿರುವ ಲೇಖಕಿ, ಹಳೆಯ ತಲೆಮಾರಿನ (ಪ್ರತ್ಯಕ್ಷದರ್ಶಿಗಳ) ಕೊಂಡಿಯಾಗಿದ್ದಾರೆ. ಅವರು ಮೈಸೂರು ಆಶ್ರಮದ ಭಕ್ತರು ಹಾಗೂ ಉತ್ತಮ ಲೇಖಕಿ.**

ಒಂದು ದಿನ ಮೈಸೂರು ಚಾಮುಂಡಿ ಬೆಟ್ಟದ ಶ್ರೀಚಾಮುಂಡೇಶ್ವರಿ ದೇವಸ್ಥಾನದಲ್ಲಿ ಅರ್ಚಕರೊಬ್ಬರು ತಮ್ಮ ಪಾಲಿನ ಸೇವೆಯನ್ನು ಅಮ್ಮನವರಿಗೆ ಸಲ್ಲಿಸಿ, ಮನೆಗೆ ಬಂದು, ತಮ್ಮ ತಾಯಿಗೆ ಹೇಳಿದರು: ''ಅಕ್ಕಾ, ಇಂದು ಒಂದು ವಿಶೇಷ ಸುದ್ದಿ ಕೇಳು. ಬೆಳಗ್ಗೆ ಒಬ್ಬ ಸಂನ್ಯಾಸಿ ದೇವಸ್ಥಾನಕ್ಕೆ ಬಂದಿದ್ದ. ಸುಮಾರು ಮೂವತ್ತು ವಯಸ್ಸಿನ ಒಳಗೆ ಇದ್ದಿರಬಹುದು. ದೇವಸ್ಥಾನದ ಒಳಕ್ಕೆ ಬರುತ್ತಿದ್ದಂತೆಯೇ ದೇವಸ್ಥಾನದ ಕೆಲಸಗಾರರು, ಪರಿಚಾರಕರು, ಇತರೇ ಕೆಲಸ ಮಾಡುತ್ತಿದ್ದವರೂ, ದೇವಸ್ಥಾನಕ್ಕೆ ಬಂದಿದ್ದ ಭಕ್ತರೂ ಎಲ್ಲರೂ ಏನೋ ಅದ್ಭುತವನ್ನು ಕಂಡವರಂತೆ, ಅರ್ಚಕರೂ ಸೇರಿ ಬೆಕ್ಕಸ ಬೆರಗಾಗಿ ನಿಂತುಬಿಟ್ಟರು. (ಆಗ ಈಗಿನಂತೆ ಜನಸಂದಣಿ ಇರುತ್ತಿರಲಿಲ್ಲ. ಬೆಳಗಿನ ಝಾವ ಬೆಟ್ಟವನ್ನು ಹತ್ತಿ ಬರುವ ಕೆಲವು ಭಕ್ತರು, ಬೆಟ್ಟದ ಮೇಲೆ ವಾಸಿಸುವವರಲ್ಲಿ ಕೆಲವರು ಅಷ್ಟೆ.) ಶಾಂತ ವಾತಾವರಣ. ಒಂದೆರಡು ಕ್ಷಣ ಮೌನವೇ! ಯಾರಿಗೂ ಮಾತೇ ಹೊರಡದು. ಸಂನ್ಯಾಸಿ ಸೀದಾ ಹೆಬ್ಬಾಗಿಲಿನಿಂದ ಗಂಭೀರವಾದ ನಡಿಗೆಯಲ್ಲಿ ಗರ್ಭಗುಡಿಯವರೆಗೂ ಬಂದು, ನಿಂತು ಅಮ್ಮನವರನ್ನು ತದೇಕದೃಷ್ಟಿಯಿಂದ ನೋಡುತ್ತ, ಸಾಷ್ಟಾಂಗ ಪ್ರಣಾಮ ಮಾಡಿ ಎದ್ದು ನಿಂತ.

''ಈ ವೇಳೆಗೆ ಅರ್ಚಕರೂ ಮೈಮರೆವಿನಿಂದ ಎಚ್ಚೆತ್ತು, ದೇವಿಗೆ ಮಂಗಳಾರತಿ ಮಾಡಿ, ಸಂನ್ಯಾಸಿಗೆ ಕೊಟ್ಟು, ಜೊತೆಗೆ ತೀರ್ಥ, ಹೂ ಪ್ರಸಾದವನ್ನೂ ನೀಡಿದರು. ಸಂನ್ಯಾಸಿ ಯಾರ ಜೊತೆಯಲ್ಲಿಯೂ ಮಾತನಾಡಿದಂತೆ ಕಾಣಿಸಲಿಲ್ಲ. ಪುನಃ ದೇವಸ್ಥಾನದ ಪ್ರದಕ್ಷಿಣೆ ಮಾಡಿ ಹೊರಟ. ಎಲ್ಲಿಂದ ಬಂದ, ಯಾರು ಅವನು? ಎಂದು ಯಾರಿಗೂ ಕೇಳಬೇಕೆಂದೆನಿಸಲಿಲ್ಲ. ಅವನನ್ನು ನೋಡುತ್ತಿರುವುದೇ ಒಂದು ಸಂಭ್ರಮವೆನಿಸಿತ್ತು. ಆಜಾನುಬಾಹು, ಗಂಭೀರ ನಡಿಗೆ, ಧೀರೋದಾತ್ತ ಆಕಾರ, ತೇಜಃಪುಂಜ ಮುಖ, ವಿಶಾಲವಾದ ಕಣ್ಣುಗಳು. ಆ ಕಣ್ಣುಗಳಲ್ಲಿ ಏನೋ ವಿಶೇಷ ಆಕರ್ಷಣೀಯವಾದ ದೃಷ್ಟಿ, ಜೊತೆಗೆ ಕಾವಿಯ ಉಡುಪು, ಎಲ್ಲವೂ ಸೇರಿ ಅವನೊಬ್ಬ ಸಾಮಾನ್ಯ ಸಂನ್ಯಾಸಿಯಲ್ಲ ಎನ್ನುವ ಭಾವನೆ ಮನಸ್ಸಿನಲ್ಲಿ ಉಂಟಾಯಿತು. ಇಂದು ಒಬ್ಬ ಮಹಾನ್ ವ್ಯಕ್ತಿಯ ದರ್ಶನಲಾಭ ಆಯಿತೆನ್ನಬಹುದು. ಆ ರೂಪ ಮನಸ್ಸಿನಲ್ಲಿ ಅಚ್ಚೊತ್ತಿದ ಹಾಗಿದೆ'' ಎಂದರಂತೆ. ಮುಂದೆ ಕೆಲವು ವರ್ಷಗಳ ನಂತರ ಅವರೇ ವಿಶ್ವವಿಖ್ಯಾತರಾದ, ಸ್ವಾಮಿ ವಿವೇಕಾನಂದರೆಂದು ತಿಳಿಯಿತೆಂದು ಹೇಳುತ್ತಿದ್ದರು. ಲೋಕಕಲ್ಯಾಣಕ್ಕಾಗಿ ಅವರೊಂದು ಸಾಧು-ಸಂತರ ಸಂಘ ಸ್ಥಾಪಿಸಿದ್ದಾರೆಂದೂ ಗೊತ್ತಾಯಿತೆಂದು ನಮಗೆ ಹೇಳುತ್ತಿದ್ದರು. ನಮ್ಮ ಅಜ್ಜಿ ತಮ್ಮ ಮೊಮ್ಮಕ್ಕಳಿಗೆ ಸಮಯ ಸಿಕ್ಕಾಗ ಸಂನ್ಯಾಸಿಯ ವಿಷಯ ಹೇಳಿ ಆನಂದಪಡುತ್ತಿದ್ದರೆಂದು ನನ್ನ ಅಣ್ಣ, ಅಕ್ಕ ಹೇಳುತ್ತಿದ್ದರು. (ನಮ್ಮ ತಂದೆಯವರಿಗೆ ಆಗ ೧೯ ಅಥವಾ ೨೦ ವಯಸ್ಸು.)

ಈ ಘಟನೆ ನಡೆದದ್ದು ೧೮೯೨ರ ವರ್ಷಾಂತ್ಯದಲ್ಲಿ. ಸ್ವಾಮಿ ವಿವೇಕಾನಂದರು ಪರಿವ್ರಾಜಕರಾಗಿ ಕರ್ನಾಟಕಕ್ಕೆ ಬಂದಾಗ, ಮೈಸೂರಿಗೂ ದಯಮಾಡಿಸಿದರು. ಇವರ ವ್ಯಕ್ತಿತ್ವಕ್ಕೆ ಮಾರುಹೋಗಿ ಆಗಿನ ದಿವಾನರು, ಮೈಸೂರು ಮಹಾರಾಜರಾದ ಚಾಮರಾಜ ಒಡೆಯರ್ ಅವರಿಗೆ ಪರಿಚಯಿಸಿದರು. ಮಹಾರಾಜರ ಅತಿಥಿಯಾಗಿದ್ದಾಗ ಬೆಟ್ಟಕ್ಕೆ ಅಮ್ಮನವರ ದರ್ಶನಕ್ಕೆ ಬಂದಾಗ ನಡೆದ ಘಟನೆಯಿದು. ಇದರಲ್ಲಿ ವಿಶೇಷವೆಂದರೆ ಅಂದು ನಮ್ಮ ತಂದೆಯವರನ್ನು ಆಕರ್ಷಿಸಿದ ಸ್ವಾಮೀಜಿಯವರ ವ್ಯಕ್ತಿತ್ವ ಸೆಳೆತದ ನಂಟು ನಮ್ಮ ಮನೆಯವರಿಗೂ ರಾಮಕೃಷ್ಣ ಆಶ್ರಮಕ್ಕೂ ಸಂಬಂಧ ಬೆಳೆಯಲು ಮೂಲ ಎನ್ನಬಹುದು.

ನನಗೆ ಈ ವಿಷಯ ತಿಳಿದದ್ದು ೧೯೩೪ರಲ್ಲಿ, ನಮ್ಮ ತಂದೆಯವರಿಂದಲೇ ಕೇಳಿದ್ದೆ. ನನ್ನ ತಂದೆಯವರು ವಾಸವಾಗಿದ್ದದ್ದು ಚಾಮುಂಡಿಬೆಟ್ಟದಲ್ಲಿ, ಚಾಮುಂಡೇಶ್ವರಿಯ ಸನ್ನಿಧಿಯಲ್ಲಿ. ಪ್ರತಿನಿತ್ಯ 'ದುರ್ಗಾಸಪ್ತಶತಿ'ಯ ಪಾರಾಯಣದ ಸೇವೆ ಅವರ ಪಾಲಿಗೆ ಒದಗಿ ಬಂದಿತ್ತು. ಶ್ರದ್ಧೆ, ಭಕ್ತಿಯಿಂದ ತಮ್ಮ ಸೇವೆಯನ್ನು